ಕರ್ನಾಟಕ ವಿಧಾನ ಸಭೆ

ಮಂಗಳವಾರ 27ನೇ ಡಿಸೆಂಬರ್ 1994 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ... 10.15 ಗಂಟೆಗೆ ಸಮಾವೇಶಗೊಂಡಿತು.

ಹಂಗಾಮಿ ಅಧ್ಯಕ್ಷರು: (ಶ್ರೀ ಧರ್ಮಸಿಂಗ್ ಅವರು) ಪೀಠವನ್ನು ಅಲಂಕರಿಸಿದ್ದರು.

ಪ್ರಮಾಣ ವಚನ ಸ್ವೀಕಾರ

ಅಧ್ಯಕ್ಷರು:– ಈಗ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಮುಂದುವರಿಯುತ್ತದೆ.

1. ಶ್ರೀ ಕಾಗೋಡು ತಿಮ್ಮಪ್ಪ	ಸಾಗರ
2. ಶ್ರೀ ಚನ್ನಬಸಪ್ಪ ಮಹಲಿಂಗಪ್ಪ ಉದಾಸಿ	ಹಾನಗಲ್
3. ಶ್ರೀ ಚಂದ್ರಶೇಖರ ಸದಾಶಿವನಾಯಕ್	(ಗೋಕಾಕ್)
4. ಶ್ರೀ ಬಸವರಾಜ ಪಾಟೀಲ್ ಅಟ್ಟೂರು	(ಬಸವಕಲ್ಯಾಣ)
5. ಶ್ರೀ ಬಸವನಗೌಡ ಸೋಮನಗೌಡ ಪಾಟೀಲ್	(ಬಸವನ ಬಾಗೇವಾಡಿ)
6. ಶ್ರೀ ಮುನಿಯಪ್ಪ ಬಿ.	(ಗಾಂಧೀನಗರ)

ಈ ಮೇಲ್ಕಂಡ ಮಾನ್ಯ ಸದಸ್ಯರು ಪ್ರಮಾಣ ವಚನ ಸ್ವೀಕಾರ ಮಾಡಿದರು.

ಅಧ್ಯಕ್ಷರ ಚುನಾವಣೆ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ ಶ್ರೀ ರಮೇಶ್‌ಕುಮಾರ್ ಅವರನ್ನು 10ನೇ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಉಪ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಶ್ರೀ ರಮೇಶ್ ಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಹೆಚ್.ಡಿ. ದೇವೇಗೌಡರು ಸೂಚಿಸಿರುವ ಪ್ರಸ್ತಾಪವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಹಂಗಾಮಿ ಅಧ್ಯಕ್ಷರು:– ಶ್ರೀ ಹೆಚ್.ಡಿ. ದೇವೇಗೌಡರು ಸೂಚಿಸಿರುವ ಹಾಗೂ ಶ್ರೀ ಜೆ.ಎಚ್ ಪಟೇಲ್‌ರವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

ಶ್ರೀ ರಮೇಶ್‌ಕುಮಾರ್ ಅವರನ್ನು 10ನೇ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು.

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ರಮೇಶ್ ಕುಮಾರ್ ಅವರನ್ನು, ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

(ಶ್ರೀ ರಮೇಶ್‌ಕುಮಾರ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಅಧ್ಯಕ್ಷರಾಗಿ ಆಯ್ಕೆಗೊಂಡ ಸನ್ಮಾನ್ಯ ರಮೇಶ್‌ಕುಮಾರ್‌ರವರನ್ನು ಮುಖ್ಯಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ಹಾಗೂ ವಿಧಾನ ಪರಿಷತ್ತಿನ ಸಭಾನಾಯಕರಾದ ಶ್ರೀ ಎಂ.ಸಿ. ನಾಣಯ್ಯನವರು ಅಧ್ಯಕ್ಷ ಪೀಠದ ಹತ್ತಿರ ಕರೆದುಕೊಂಡು ಬಂದರು.)

(ಅಧ್ಯಕ್ಷ ಪೀಠದಲ್ಲಿದ್ದ ಹಂಗಾಮಿ ಅಧ್ಯಕ್ಷರಾಗಿದ್ದ ಶ್ರೀ ಧರ್ಮಸಿಂಗ್‌ರವರು ಅಧ್ಯಕ್ಷ ಪೀಠದಿಂದ ಎದ್ದು ಮಾನ್ಯ ರಮೇಶ್ ಕುಮಾರ್‌ರವರನ್ನು ಸ್ವಾಗತಿಸಿ ಅಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿದರು.

ಸನ್ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ ಬಗ್ಗೆ ಸಭೆಯು ಹರ್ಷ ವ್ಯಕ್ತಪಡಿಸಿತು.)

† ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):– ಸನ್ಮಾನ್ಯ ಅಧ್ಯಕ್ಷರೇ, ಈ ದಿನ ತಾವು ಈ ಸದನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರತಕ್ಕಂಥಾದ್ದು ನಮ್ಮೆಲ್ಲರಿಗೆ ಹೆಮ್ಮೆ ತಂದಿರತಕ್ಕಂಥ ವಿಚಾರವಾಗಿದೆ. ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ನನ್ನ ಪರವಾಗಿ ಹಾಗೂ ಸದನದ ಪರವಾಗಿ ತಮಗೆ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುವಂದಕ್ಕೆ ಇಚ್ಛೆಪಡುತ್ತೇನೆ. ತಾವು ಸರ್ವಾನುಮತದಿಂದ ಆಯ್ಕೆಯಾಗುವುದಕ್ಕೆ ಸಹಕಾರ ಕೊಟ್ಟಂಥ ಸದನದ ಎಲ್ಲಾ ಸದಸ್ಯರಿಗೂ ನಾನು ಅಭಾರಿಯಾಗಿದ್ದೇನೆ. ಅಷ್ಟೇ ಅಲ್ಲದೆ ವಿರೋಧಿ ಪಕ್ಷದ ಎಲ್ಲಾ ಸದಸ್ಯರುಗಳು ಹಾಗೂ ಮುಖಂಡರುಗಳು ತಾವು ಸರ್ವಾನುಮತದಿಂದ ಆಯ್ಕೆಯಾಗುವುದಕ್ಕೆ ಸಹಕಾರ ಕೊಟ್ಟು ಒಂದು ಸತ್ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ ಮತ್ತು ಈ ಆಯ್ಕೆಯು ಸರ್ವಾನುಮತದಿಂದ ಆಗುವುದಕ್ಕೆ ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ನಾನು ಋಣಿಯಾಗಿದ್ದೇನೆ. ಇವೊತ್ತು ತಾವು ವಹಿಸಿಕೊಂಡಿರತಕ್ಕಂಥ ಸ್ಥಾನವು ಅತ್ಯಂತ ಎತ್ತರವಾದುದು ಮತ್ತು ಮಹತ್ತರವಾದ ಸ್ಥಾನವಾಗಿದೆ. ಈ ಸ್ಥಾನದಲ್ಲಿ ಆಸೀನರಾಗಿ ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗತಕ್ಕಂಥ ಕಾಲದಲ್ಲಿ ಇಡೀ ರಾಜ್ಯದ ಐದು ಕೋಟಿ ಜನತೆಯು ಈ ಸದನದ ಕಾರ್ಯಕಲಾಪಗಳನ್ನು ಈ ಸದನಕ್ಕೆ ಬಂದು ಸ್ವತಃ ನೋಡುವುದಕ್ಕೆ ಸಾಧ್ಯವಾಗದೇ ಇದ್ದರೂ ಕೂಡ ಕಾರ್ಯಕಲಾಪಗಳನ್ನು ಹೊರಗಿನಿಂದ ವೀಕ್ಷಿಸುತ್ತಾ ಇರತಕ್ಕಂಥಾದ್ದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ಈ ಸದನದ ಗೌರವವನ್ನು, ಘನತೆಯನ್ನು ಎತ್ತಿ ಹಿಡಿಯತಕ್ಕಂಥ ಒಂದು ಸನ್ನಿವೇಶದಲ್ಲಿ ಇಡೀ ಸದನದ ಎಲ್ಲಾ ಭಾಗದ ಗೌರವಾನ್ವಿತ ಸದಸ್ಯರುಗಳು ತಮಗೆ ಸಹಕಾರವನ್ನು ಕೊಡಬೇಕಾಗುತ್ತದೆ. ತಾವು ಅತ್ಯಂತ ವಿಶೇಷವಾದಂಥ ಸನ್ನಿವೇಶದಲ್ಲಿ ಈ ಉನ್ನತ ಸ್ಥಾನವನ್ನು ಅಲಂಕರಿಸಿದ್ದೀರಿ. ಬಹುಶಃ ನನ್ನ ದೀರ್ಘವಾದ ಅನುಭವದಲ್ಲಿ ಅಂದರೆ ಸುಮಾರು 28 ವರ್ಷಗಳ ಕಾಲ ಈ ಸದನದಲ್ಲಿ ನಾನು ಕಾರ್ಯನಿರ್ವಹಣೆ ಮಾಡಿದ್ದೇನೆ, ಆ ಒಂದು ಅನುಭವದ ಹಿನ್ನಲೆಯಲ್ಲಿ ಹೇಳುವುದಾದರೆ ಈ ಸಾರಿ ಈ ಸದನದ ಒಂದು ರಾಜಕೀಯ ಸನ್ನಿವೇಶ ಏನಿದೆ, ಅದರಿಂದ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಈ ಸದನವನ್ನು ನಡೆಸಿಕೊಂಡು ಹೋಗತಕ್ಕಂಥಾದ್ದರಲ್ಲಿ ತಮಗಿರತಕ್ಕಂಥ ಅನುಭವ ಮತ್ತು ಸಭೆಯ ನಡವಳಿಕೆಗಳನ್ನು ನಡೆಸಲು ಇರತಕ್ಕಂಥ ಒಂದು ಪರಿಚಯದ ಕಾರಣದಿಂದಾಗಿ ಸದನದ ಕಾರ್ಯಕಲಾಪಗಳನ್ನು ನಡೆಸಲು ತಮಗೆ ಆಗುತ್ತದೆ ಎಂಬ ವಿಚಾರವನ್ನು ಆತ್ಮವಿಶ್ವಾಸಪೂರ್ವಕವಾಗಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಹಿಂದಿನ ಘಟನೆಗಳನ್ನು ಹೇಳಲು ಹೋಗುವುದಿಲ್ಲ. ಶ್ರೀಮಾನ್ ವೈಕುಂಠಬಾಳಿಗಾರವರು ಅಧ್ಯಕ್ಷರಾಗಿರತಕ್ಕಂಥ ಕಾಲದಲ್ಲಿ ನಾವೆಲ್ಲರೂ ಸದಸ್ಯರಾಗಿ ಕೆಲಸ ಮಾಡತಕ್ಕಂಥ ಸೌಭಾಗ್ಯ ಸಿಕ್ಕಿತ್ತು. ಅಲ್ಲಿಂದ ಈಚೆಗೆ ಆ ಸ್ಥಾನವನ್ನು ಬಹಳ ಜನರು ಅಲಂಕರಿಸಿ ಹೋಗಿದ್ದಾರೆ. ಅನೇಕ ಘಟನೆಗಳನ್ನು ನಾವು ಈ ಸದನದಲ್ಲಿ ವೀಕ್ಷಿಸಿದ್ದೇವೆ. ಆದರೆ ಒಂದು ಮಾತನ್ನು ನಾನು ದುಃಖದಿಂದ ಹೇಳಬೇಕಾಗುತ್ತದೆ. ಇಡೀ ರಾಷ್ಟ್ರದ ರಾಜಕಾರಣದಲ್ಲಿ ಈ ಒಂದು ಸಂಸ್ಥೆಗಳಿಗೆ, ಅದು ವಿಧಾನ ಸಭೆಯೇ ಇರಲಿ, ವಿಧಾನಪರಿಷತ್ತೇ ಇರಲಿ, ಲೋಕಸಭೆಯೇ ಇರಲಿ, ಯಾವ ಒಂದು ಮಹತ್ವವನ್ನು ಘನತೆ ಗೌರವವನ್ನು ಕೊಟ್ಟಿದ್ದಾರೋ ಮತ್ತು ನಮ್ಮ ಸಂವಿಧಾನವನ್ನು ಬರೆದಿರತಕ್ಕಂಥ ಹಿರಿಯರು ಆ ಒಂದು ಘನತೆ ಗೌರವವನ್ನು ಉಳಿಸಿಕೊಂಡು ಹೋಗತಕ್ಕಂಥಾದ್ದರಲ್ಲಿ ಸ್ವಲ್ಪ ಮಟ್ಟಿಗೆ ಇಡೀ ದೇಶದಲ್ಲಿನ ಕಲುಷಿತ ರಾಜಕೀಯ ವಾತಾವರಣದಲ್ಲಿ ಇಳಿಮುಖವಾಗುತ್ತಾ ಇದೆ. ಆದರೆ ಸುದೈವದಿಂದ ಎಂಥ ಐತಿಹ್ಯ ಘಟನೆಗಳು ಕರ್ನಾಟಕದಲ್ಲಿ ಬಂದರೂ ಕೂಡ ಈ ನಮ್ಮ ರಾಜ್ಯದ